ಪಬ್ಲಿಕ್ ವರ್ಕ್ಸ್ ಇಲಾಖಾ.

ಇಸ್ತಿಹಾರ್.

ಕೋಲಾರ ಡಿವೀರ್ಜ್.

ತಾರೀಖು 24ನೇ ನವಂಬರ್ 1885.

ರಾಮಸಾಗರ ಸೀರೀಸ್ ಯಾನೆ ಸಾಲ್ ಕೆರೆಗಳಿಗೆ ಕೀರಿದ 422ನೇ ನಂಬರುಳ್ಳ ಕಿಟ್ಟಿಪಳ್ಳಿ ಕೆರೆಯನ್ನು ದುರಸ್ತುಮಾಡತಕ್ಕ ಬಗ್ಗೆ ಇದರದೆಸೆಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ. ಈ ಬಗ್ಗೆ 9,550 ರೂಪಾಯಿಗಳ ಅಂದಾಜ ಮಂಜೂರಾಗಿರುತ್ತೆ.

2. ಪ್ಲಾನುಗಳು, ಅಂದಾಜು ಪಟ್ಟಿಗಳು, ದರಗಳ ಷಡ್ಯೂಲ್ಪಟ್ಟಿ ಮತ್ತು ಷರತ್ತುಗಳು ಇವುಗಳನ್ನ ಎಕ್ಜಿಕ್ಯೂಟಿವ್ ಇಂಜನಿಯರ್ ಆಫೀಸಿನಲ್ಲಿ ಪ್ರತಿ ನಿತ್ಯವು ಪ್ರಾತಃಕಾಲ 11 ಘೆಂಟೆ ಲಾಗಾಯಿತು ಸಾಯಂಕಾಲ 4 ಘೆಂಟೆವರಿಗೂ ನೋಡಬಹುದು.

3. ಭಾವಿಸಿದ ದರಖಾಸ್ತು ನಮೂನೆಗಳಿಗಾಗಿ ಎಕ್ಜಿಕ್ಯೂಟಿವ್ ಇಂಜನಿಯರವರಿಗೆ ಬರದು ಕೊಂಡಲ್ಲಿ ಬಗರ್ ಖಿಮ್ಮತ್ತು ದೊರಿಯುವವು. ಈ ನಮೂನೆಗಳಲ್ಲಿ ಕಂಟ್ರಾಕ್ಟುದಾರನು ತಪೇಲು ನಮೂದಿಸಿ, ರುಜುನೀ ಲಕ್ಕೊಟೆಯಲ್ಲಿ ಹಾಕಿ ಮೊಹರ್‌ಮಾಡಿ ಸ್ಯ 1885ನೇ ಇಸವಿ ಡಿಸಂಬರ್ 15ನೇ ತಾರೀಖಿಗೆ ಮುಂಚಿತವಾಗಿ ಎಕ್ಜಿಕ್ಯೂಟಿವ್ ಇಂಜನಿಯರವರ ಬಳಿಗೆ ಕಳುಹಿಸತಕ್ಕದ್ದು.

4. ಯಾವದಾದರು ಒಂದು ದರಖಾಸ್ತಿನ ಆಖೈರು ಮಂಜೂರಾತಿಯು ಸೂಪರ್‌ಟೆಂಡಿಂಗ್ ಇಂಜನಿಯರವರನ್ನ ಹೊಂದಿರುತ್ತೆಯಾಗಿ ಈ ದರಖಾಸ್ತನ್ನೇ ಆಗಲಿ ಯಾ ಯಾವದರಖಾಸ್ತನ್ನೇ ಆಗಲಿ ಮಂಜೂರ್ಮಾಡಲಿಕ್ಕೆ ಯಾ ಯಾವದಾದರು ಒಂದು ದರಖಾಸ್ತನ್ನ ತಿರಸ್ಕರಿಸಿದ್ದಕ್ಕಾಗಿ ಸಬಬ್ ನಮೂದಿಸಲಿಕ್ಕೆ ಸಹ ಸದರೀಯವರು ಬದ್ಧರಾಗಿರುವದಿಲ್ಲ.

5. ದರಖಾಸ್ತು ಮಂಜೂರಾತ 8 ದಿನಗಳ ಒಳಗಾಗಿ ದರಖಾಸ್ತುದಾರನು ನಗದಾಗಿ 300 ರೂಪಾಯಿಗಳ ಶೇವಣಾತಿಯನ್ನ ಇಡತಕ್ಕದ್ದಲ್ಲದೆ ಮಾಮೂಲ್ ಮೇರಿಗೆ ಕಂಟ್ರಾಕ್ಟು ಮುಚ್ಚಳಿಕೆಯನ್ನ ಬರದುಕೊಡತಕ್ಕದ್ದು, ಹಾಗೆ ನಡಿಸಲು ತಪ್ಪಿದಲ್ಲಿ ಅಂಥಾವನ ದರಖಾಸ್ತು ರದ್ದಾದಂತೆ ಯೇಣಿಸಲ್ಪಡುವದು.

6. ಯಾವ ಕಂಟ್ರಾಕ್ಟುದಾರನ ದರಖಾಸ್ತು ಮಂಜೂರ್ಮಾಡಲ್ಪಡುತ್ತೊ ಅಂಥಾವನ ಹೆಸರು ಕ್ರಮೇಣ ಎಕ್ಜಿಕ್ಯೂಟಿವ್ ಇಂಜನಿಯರವರ ಆಫೀಸಿನ ನೋಟಿಸ್ ಬೋರ್ಡಿನ ಮೇಲೆ ನಮೂದಿಸಲ್ಪಡುವದು. ಯಾವ ದರಖಾಸ್ತಿನ ಮಂಜೂರಾತಿ ಯಾ ತಿರಸ್ಕಾರ ವಿಷಯದಲ್ಲಿ ಬರದುಕೊಂಡಲ್ಲಿ ಜವಾಬ್ ದೊರಿಯಲಾರದು.

ವೈ. ಶ್ರೀನಿವಾಸರಾವ್,
ಅ|| ಎ|| ಇಂಜನಿಯರ್.

ತುಮಕೂರು ಡಿವೀರ್ಜ್.

ಇಸ್ತಿಹಾರ್.

ತಾರೀಖು 30ನೇ ನವಂಬರ್ 1885.

ಚಿಕ್ಕನಾಯಿಕನಹಳ್ಳಿ ತಾಲ್ಲೂಕು ತಿಮ್ಮನಹಳ್ಳಿ ಕೆರೆಯಂನ್ನು ದುರಸ್ತುಮಾಡಲಿಕ್ಕೆ ಇದರ ದೆಸೆಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ. ಈ ಬಗ್ಗೆ 22,231 ರೂಪಾಯಿಗಳ ಅಂದಾಜೆ ಮಂಜೂರಾಗಿರುತ್ತೆ, ಆದರೆ 15,899 ರೂಪಾಯಿಗಳಮಟ್ಟಿಗೆ ಈಗ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

2. ಪ್ಲಾನುಗಳು, ಅಂದಾಜು ಪಟ್ಟಿಗಳು, ದರಗಳ ಷೆಡ್ಯೂಲ್ಪಟ್ಟಿ ಮತ್ತು ಷರತ್ತುಗಳು ಇವುಗಳನ್ನ ಎಕ್ಜಿಕ್ಯೂಟಿವ್ ಇಂಜನಿಯರ್ ಆಫೀಸಿನಲ್ಲಿ ಪ್ರತಿ ನಿತ್ಯವು ಪ್ರಾತಃಕಾಲ 11 ಘೆಂಟೆ ಲಾಗಾಯಿತು ಸಾಯಂಕಾಲ 4 ಘೆಂಟೆವರಿಗೂ ನೋಡಬಹುದು.

3. ಭಾವಿಸಿದ ದರಖಾಸ್ತು ನಮೂನೆಗಳಿಗಾಗಿ ಎಕ್ಜಿಕ್ಯೂಟಿವ್ ಇಂಜನಿಯರವರಿಗೆ ಬರದು ಕೊಂಡಲ್ಲಿ ಬಗರ್ ಖಿಮ್ಮತ್ತು ದೊರಿಯುವವು. ಈ ನಮೂನೆಗಳಲ್ಲಿ ಕಂಟ್ರಾಕ್ಟುದಾರನು ತಪೇಲು ನಮೂದಿಸಿ, ರುಜುನಿಸಿ ಲಕ್ಕೊಟೆಯಲ್ಲಿ ಹಾಕಿ ಮೊಹರ್‌ಮಾಡಿ ಸ್ಯ 1885ನೇ ಇಸವಿ ಡಿಸಂಬರ್ 15ನೇ ತಾರೀಖಿಗೆ ಮುಂಚಿತವಾಗಿ ಎಕ್ಜಿಕ್ಯೂಟಿವ್ ಇಂಜನಿಯರವರ ಬಳಿಗೆ ಕಳುಹಿಸತಕ್ಕದ್ದು.

4. ಯಾವದಾದರು ಒಂದು ದರಖಾಸ್ತಿನ ಆಖೈರು ಮಂಜೂರಾತಿಯು ಸೂಪರ್‌ಟೆಂಡಿಂಗ್ ಇಂಜನಿಯರವರನ್ನ ಹೊಂದಿರುತ್ತೆಯಾಗಿ ಈ ದರಖಾಸ್ತನ್ನೇ ಆಗಲಿ ಯಾ ಯಾವ ದರಖಾಸ್ತನ್ನೇ ಆಗಲಿ ಮಂಜೂರ್ಮಾಡಲಿಕ್ಕೆ ಯಾ ಯಾವದಾದರು ಒಂದು ದರಖಾಸ್ತನ್ನ ತಿರಸ್ಕರಿಸಿದ್ದಕ್ಕಾಗಿ ಸಬಬ್ ನಮೂದಿಸಲಿಕ್ಕೆ ಸಹ ಸದರೀಯವರು ಬದ್ಧರಾಗಿರುವದಿಲ್ಲ.

5. ದರಖಾಸ್ತು ಮಂಜೂರಾದ 8 ದಿನಗಳ ವಳಗಾಗಿ ದರಖಾಸ್ತುದಾರನು ನಗದಾಗಿ 500 ರೂಪಾಯಿಗಳ ಶೇವಣಾತಿಯನ್ನು ಇಡತಕ್ಕದ್ದಲ್ಲದೆ ಮಾಮೂಲ್ ಮೇರಿಗೆ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರದುಕೊಡತಕ್ಕದ್ದು, ಹಾಗೆ ನಡಿಸಲು ತಪ್ಪಿದಲ್ಲಿ ಅಂಥಾವನ ದರಖಾಸ್ತು ರದ್ದಾದಂತೆ ಯೀಣಿಸಲ್ಪಡುವದು.

6. ಯಾವ ಕಂಟ್ರಾಕ್ಟುದಾರನ ದರಖಾಸ್ತು ಮಂಜೂರ್ಮಾಡಲ್ಪಡುತ್ತೊ ಅಂಥಾವನ ಹೆಸರು ಕ್ರಮೇಣ ಎಕ್ಜಿಕ್ಯೂಟಿವ್ ಇಂಜನಿಯರವರ ಆಫೀಸಿನ ನೋಟಿಸ್ ಬೋರ್ಡಿನ ಮೇಲೆ ನಮೂದಿಸಲ್ಪಡುವದು. ಯಾವ ದರಖಾಸ್ತಿನ ಮಂಜೂರಾತಿ ಯಾ ತಿರಸ್ಕಾರ ವಿಷಯದಲ್ಲಿ ಬರದುಕೊಂಡಲ್ಲಿ ಜವಾಬ್ ದೊರಿಯಲಾರದು.

ತಾರೀಖು 30ನೇ ನವಂಬರ್ 1885.

ಗುಬ್ಬಿ ತಾಲ್ಲೂಕು 82ನೇ ರಿಜಿಸ್ಟರ್ ನಂಬರುಳ್ಳ ಕಡಬದ ಕೆರೆಯನ್ನು ದುರಸ್ತು ಮಾಡಲಿಕ್ಕೆ ಇದರ ದಸೆಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ. ಈ ಬಗ್ಗೆ ಮಂಜೂರಾಗಿರುವ ಮೊಬಲಗು 11,492; ಅದರೆ 7,494 ರೂಪಾಯಿಗಳ ಮಟ್ಟಿಗೆ ಈಗ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತವೆ, ಇದರಗೋಷವಾರೆ ಪಟ್ಟಿಯನ್ನು ಎಗ್ಜಿಕ್ಯೂಟಿವ್ ಇಂಜನಿಯರ್ ಆಫೀಸಿನಲ್ಲಿ ನೋಡಬಹುದು.

2. ಪ್ಲಾನುಗಳು, ಅಂದಾಜು ಪಟ್ಟಿಗಳು, ದರಗಳ ಷಡ್ಯೂಲ್ಪಟ್ಟಿ ಮತ್ತು ಷರತ್ತುಗಳು ಇವುಗಳನ್ನು ಎಕ್ಜಿಕ್ಯೂಟಿವ್ ಇಂಜನಿಯರ್ ಆಫೀಸಿನಲ್ಲಿ ಪ್ರತಿ ನಿತ್ಯವು ಪ್ರಾತಃಕಾಲ 11 ಘಂಟೆ ಲಾಗಾಯಿತು ಸಾಯಂಕಾಲ 4 ಘಂಟೆವರಿಗೂ ನೋಡಬಹುದು.

3. ಭಾಪಿಸಿದ ದರಖಾಸ್ತು ನಮೂನೆಗಳಿಗಾಗಿ ಎಕ್ಜಿಕ್ಯೂಟಿವ್ ಇಂಜನಿಯರವರಿಗೆ ಬರದು ಕೊಂಡಲ್ಲಿ ಬಗರ್ ಖಿಮ್ಮತ್ತು ದೊರಿಯುವವು. ಈ ನಮೂನೆಗಳಲ್ಲಿ ಕಂಟ್ರಾಕ್ಟುದಾರನು ತಪಶೀಲು ನಮೂದಿಸಿ, ರುಜುನೀ ಲಕ್ಕೋಟೆಯಲ್ಲಿ ಹಾಕಿ ಮೊಹರ್ಮಾಡಿ ಸ್ರ 1885ನೇ ಇಸವಿ ಡಿಸಂಬರ್ 20ನೇ ತಾರೀಖಿಗೆ ಮುಂಚಿತವಾಗಿ ಎಕ್ಜಿಕ್ಯೂಟಿವ್ ಇಂಜನಿಯರವರ ಬಳಿಗೆ ಕಳುಹಿಸತಕ್ಕದ್ದು.

4. ಯಾವದಾದರು ಒಂದು ದರಖಾಸ್ತಿನ ಅಬೈರು ಮಂಜೂರಾತಿಯು ಸೂಪರ್ಟೆಂಡಿಂಗ್ ಇಂಜನಿಯರವರನ್ನು ಹೊಂದಿರುತ್ತೆಯಾಗಿ ಈ ದರಖಾಸ್ತನ್ನೇ ಅಗಲಿ ಯಾ ಯಾವ ದರಖಾಸ್ತನ್ನೇಅಗಲಿ ಮಂಜೂರ್ಮಾಡಲಿಕ್ಕೆ ಯಾ ಯಾವದಾದರು ಒಂದು ದರಖಾಸ್ತನ್ನು ತಿರಸ್ಕರಿಸಿದ್ದಕ್ಕಾಗಿ ಸಬಬ್ ನಮೂದಿಸಲಿಕ್ಕೆ ಸಹ ಸದರೀಯವರು ಬದ್ಧರಾಗಿರುವದಿಲ್ಲ.

5. ದರಖಾಸ್ತು ಮಂಜೂರಾದ 8 ದಿನಗಳ ವಳಗಾಗಿ ದರಖಾಸ್ತುದಾರನು ನಗದಾಗಿ 300 ರೂಪಾಯಿಗಳ ಶೇವಣಾತಿಯನ್ನು ಇಡತಕ್ಕದ್ದಲ್ಲದೆ ಮಾಮೂಲ್ ಮೇರಿಗೆ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರದುಕೊಡತಕ್ಕದ್ದು, ಹಾಗೆ ನಡಿಸಲು ತಪ್ಪಿದಲ್ಲಿ ಅಂಥಾವನ ದರಖಾಸ್ತು ರದ್ದಾದಂತೆ ಯೀಣಿಸಲ್ಪಡುವದು.

6. ಯಾವ ಕಂಟ್ರಾಕ್ಟುದಾರನ ದರಖಾಸ್ತು ಮಂಜೂರ್ಮಾಡಲ್ಪಡುತ್ತೊ ಅಂಥಾವನ ಹೆಸರು ಕ್ರಮೇಣ ಎಕ್ಜಿಕ್ಯೂಟಿವ್ ಇಂಜನಿಯರವರ ಆಫೀಸಿನ ನೋಟಿಸ್ ಬೋರ್ಡಿನ ಮೇಲೆ ನಮೂದಿಸಲ್ಪಡುವದು. ಯಾವ ದರಖಾಸ್ತಿನ ಮಂಜೂರಾತಿ ಯಾ ತಿರಸ್ಕಾರ ವಿಷಯದಲ್ಲಿ ಬರದುಕೊಂಡಲ್ಲಿ ಜವಾಬ್ ದೊರಿಯಲಾರದು.

ಸಿ. ಟಿ. ಬಳಾಲ್,
ಎಗ್ಜಿಕ್ಯೂಟಿವ್ ಇಂಜನಿಯರ್.

ಶ್ರೆಂಬ್ರಾಕ್ಸ್ ರೇಂಜ್.

ತಾರೀಖು 7ನೇ ಡಿಸಂಬರ್ 1885.

ನಾಗಮಂಗಲ ತಾಲ್ಲೂಕು 33ನೇ ರಿಜಸ್ಟರು ನಂಬರ್‌ವುಳ್ಳ ಧವಳಾಪುರದ ಕೆರೆಯ ದುರಸ್ತು ಬಗ್ಗೆ ಇದರಿಂದ ಟೆಂಡರುಗಳು ಅಪೇಕ್ಷಿಸುತ್ತೆ, ಯಿದಕ್ಕಾಗಿ 4,377 ರೂಪಾಯಿಗಳ ಅಂದಾಜ ಮೊಬಲಗು ಮಂಜೂರಾಗಿರುತ್ತೆ.

2. ಪ್ಲಾನುಗಳು, ಅಂದಾಜ ಪಟ್ಟಿಗಳು, ದರಗಳ ಷೆಡ್ಯೂಲ್ ಪಟ್ಟಿ ಮತ್ತು ಷರತ್ತುಗಳು ಇವುಗಳನ್ನು ಅಸಿಸ್ಟೆಂಟ್ ಇಂಜನಿಯರ್ ಆಫೀಸಿನಲ್ಲಿ ಪ್ರತಿನಿತ್ಯವು ಪ್ರಾತಃಕಾಲ 11 ಘಂಟೆ ಲಾಗಾಯಿತು ಸಾಯಂಕಾಲ 4 ಘಂಟೆಯವರಿಗೂ ನೋಡಬಹುದು.

3. ಭಾಪಿಸಿದ ದರಖಾಸ್ತು ನಮೂನೆಗಳಿಗಾಗಿ ಅಸಿಸ್ಟೆಂಟ್ ಇಂಜನಿಯರವರಿಗೆ ಬರದುಕೊಂಡಲ್ಲಿ ಬಗರ್ ಖಿಮ್ಮತ್ತು ದೊರಿಯುವವು. ಈ ನಮೂನೆಗಳಲ್ಲಿ ಕಂಟ್ರಾಕ್ಟುದಾರನು ತಪಸೀಲ್ ನಮೂದಿಸಿ ರುಜುನೀ ಲಕ್ಕೋಟೆಯಲ್ಲಿ ಹಾಕಿ ಮೊಹರ್ ಮಾಡಿ ಸ್ರ 1885ನೇ ಇಸವಿ ಡಿಸಂಬರ್ 16ನೇ ತಾರೀಖಿಗೆ ಮುಂಚಿತವಾಗಿ ಅಸಿಸ್ಟೆಂಟ್ ಇಂಜನಿಯರವರ ಬಳಿಗೆ ಕಳುಹಿಸತಕ್ಕದ್ದು.